# GOVERNMENT OF KARNATAKA PROCEEDINGS

**Subject:** In-principle approval for construction of balancing/storage reservoir across River Cauvery near Mekedatu in the downstream of Krishna Raja Sagara Dam.

** ** **

**Reference:** Managing Director, Cauvery Neeravari Nigam Limited, Bengaluru letter no: CNN/Tech-3/MPD-151/Vol-1/2016-17/817, dt: 04/06.06.2016.

**Proposal:**

Vide reference cited above, the Managing Director, Cauvery Neeravari Nigam Limited, Bengaluru submitted a proposal stating that River Cauvery originates at Talacauvery of Brahmagiri hills in the Western Ghats located in Kodagu District of Karnataka and flows eastwards in the states of Karnataka and Tamil Nadu and join the Bay of Bengal. The total Catchment Area of the River Cauvery from its origin to Bay of Bengal is 81,155 sq. Km. Out of which, the catchment area within the State of Karnataka is 34,273 sq. Km. As per Cauvery Water Dispute Tribunal (CWDT) Award, Karnataka State is ensured to release 192 TMC of water at the identified inter-state area and also CWC gauging station located at Biligundlu at the state boundary. This quantity of water shall most likely be released from Krishna Raja Sagara Reservoir and Kabini Reservoir. The Krishna Raja Sagara (KRS) Reservoir across River Cauvery is the only reservoir with the storage capacity of 49.452 TMC with a catchment area of 23,231 sq. Km. and the water from the downstream of KRS enters the State of Tamil Nadu. There is no storage facility located in the downstream of KRS Reservoir in the state of Karnataka and the unrestricted flow of water from this region enters the State of Tamil Nadu. In addition, in the downstream command areas of KRS Reservoir, there will be considerable availability of regenerated water.

2. Further, it is proposed to construct a balancing/storage reservoir near Mekedatu located at a distance of 100 Km from Bengaluru city and 4 Km from the confluence point of Rivers Arkavathy and Cauvery. This project will help in regulating the allocated flow of water to the State of Tamil Nadu and also helps in rejuvenation of river, environmental protection, improvement in ground water table and providing drinking water facilities. The main salient features of the project are as given below;

A. As per the Cauvery Water Dispute Tribunal Award, it is ensuring to regulate the required quantum of 192 TMC of water to Tamil Nadu from the proposed reservoir in a normal year (by storing water during Monsoon season).

B. About 400 MW of hydroelectric power generation.

C. Providing 16.10 TMC and 50 TMC of drinking water to Bengaluru and its surrounding areas along with other cities, towns and villages in Cauvery basin.

D. As per Tribunal award, 433 TMC of water (which includes 419 TMC in the entire Cauvery basin + 10 TMC for environment protection +4 TMC towards inevitable escape) to the State of Tamil Nadu, 270 TMC of water to the state of Karnataka, 30 TMC of water to the state of Kerala and 7 TMC of water to Puducherry has been allocated.

E. The additional allocation of 17.64 TMC is also a part of the total allocation of 270 TMC of water to the State of Karnataka.

F. As mentioned above, there shall be no disputes for the utilization of 17.64 TMC of water for providing drinking water facilities to Bengaluru, its surrounding areas and other cities, towns and villages of Cauvery basin through the proposed Mekedatu drinking water and hydroelectric project.

3. Further, following components have been incorporated in the Project Report;

(a) It is proposed to construct a high level gravity dam at Mekedatu with a full reservoir elevation of 440 mtrs. Having a storage capacity of 67.14 TMC.

(b) the dam will have suitable spill-way in terms of radial gates to effectively discharge the design flood with suitable energy dissipating arrangements on the downstream side.

(c) The extent of submergence of the land on the upstream at the full reservoir level works out to 4996 Ha.

(d) Intake structure with water conducting system consisting of required number of pen stocks, pressure shafts which will be embedded in the body of the dam to feed the water continuously to the generating units.

(e) Underground powerhouse is proposed downstream of Mekedatu dam with an installed capacity of 400 MW.

(f) Average annual energy available is 1357.84 Million Units (Annual PLF 41.5%).

4. It is noticed that, in most of the months, the monthly inflows at KRS, Hemavathy, Harangi and Kabini reservoirs are less than the specified quantity of water and the water stored at these reservoirs are released to the downstream States. This is affecting the reservoir dependent command areas with shortage of water. Hence, the construction of balancing/storage reservoirs in the upstream of Mekedatu will help in storage of additional water that flows during monsoon season and thereby regulating the allocated flow of water to the neighbouring states. The project also helps in providing drinking water facilities to Bengaluru and its surrounding areas and also helps in generating hydroelectric power.

5. In 1995, the then Government constituted a committee under the leadership of Shri. K. C Reddy and Elected Representatives examine the Mekedatu Hydroelectric project components and submitted the report to reduce the Full Reservoir Level from RL 478.00 m to RL 440 m.

6. Finance Department in its note dt: 20.08.2016 opined as follows;

> *"Though there are legal complications in the implementation of Mekedatu project; since the project requires approval from Central Water Commission and Supreme Court, the Finance Department agreed to accord in- principle consent for the project with an instruction to Water Resource Department to identify the source of funding and prepare finance plan for the project before starting the works".*

7. In view of the above, the Managing Director, Cauvery Neeravari Nigam Limited, Bengaluru has requested to accord the administrative approval for the preparation of Detailed Feasibility Report for the construction of Mekedatu balancing/storage reservoir project near Mekedatu in the downstream areas of KRS reservoir for Rs. 5912.00 Crores.

8. For this proposal, the comments / suggestions of Chief Engineer (ISWD), Water Resources Development Organization, Bangalore and Sri. Mohaan V. Kaatharki, Advocate from of team of state lawyer's of Supreme Court in Cauvery and for other water disputes has been obtained.

9 The proposal has been examined and the following order has been issued to comply with the instructions stated in Sl.No (6).

**Government order No: WRD136 MMK 2013**
**Bengaluru, Dt: 13.03.2017**

In-principle administrative approval is hereby for the preparation of Detailed Feasibility Report for the construction of Mekedatu balancing/storage reservoir project near Mekedatu in the downstream areas of KRS reservoir for Rs. 5912.00 Crores (Five Thousand Nine Hundred and Twelve Crores) with a condition to comply with the suggestions as stated in Sl.No (6).

This administrative approval has been issued with the consent of Finance Department note No: FD 345 FC-1/2016. dt:20.08.2016.

By order and in the name
of Governor of Karnataka

Sd/-
(K.V Ananthu)
Special Officer (Technical, MMI-3)
Water Resource Department

Copy to:

1. The Principal Chief Accountant, (General and Social Division Audits) Bengaluru, Karnataka.
2. The Managing Director, Cauvery Neeravari Nigam Ltd, Bengaluru.
3. The Chief Engineer (ISWD), Water Resources Development Organization, Bangalore.
4. The Chief Engineer Irrigation (South) Zone, Mysore.
5. The Additional Secretary to Government (ISWD), Law Department, (Note No. Law/21/T/Suggestions/2017, Dated 13.02.2017)
6. The Personal Secretary to the Hon'ble Minister of Water Resources Department, Vidhana Soudha, Bengaluru.
7. The Special Officer and Deputy Secretary to the Government, Finance Department (PWD Finance Cell), Vidhana Soudha, Bengaluru.
8. The Personal Secretary to the Chief Secretary to the Government (Cabinet), Government of Karnataka (Subject no. C- 116/2017, Date: 15-02-2017)
9. Guard file / Additional copies.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾವೇರಿ ನದಿಗೆ ಕೃಷ್ಣರಾಜಸಾಗರ ಅಣೆಕಟ್ಟೆ ಕೆಳಭಾಗದಲ್ಲಿ ಮೇಕೆದಾಟು ಸಮೀಪ ಸಮತೋಲನ / ಶೇಖರಣಾ ಜಲಾಶಯವನ್ನು (Balancing / Storage reservoir) ನಿರ್ಮಿಸುವ ಪ್ರಸ್ತಾವನೆಗೆ ತಾತ್ವಿಕ ಅನುಮೋದನೆ ನೀಡುವ ಬಗ್ಗೆ.

** ** **

*ಓದಲಾಗಿದೆ :-*

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-3/ಎಂ.ಪಿ.ಡಿ-151/Vol-1/2016-17/817, ದಿನಾಂಕ:04/06-06-2016.

*ಪ್ರಸ್ತಾವನೆ :-*

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು, ವಿಷಯದ ಬಗ್ಗೆ ಪ್ರಸ್ತಾವನೆ ಸಲ್ಲಿಸುತ್ತಾ, ಕಾವೇರಿ ನದಿಯು ಕರ್ನಾಟಕದ ಪಶ್ಚಿಮ ಘಟ್ಟದ ಬ್ರಹ್ಮಗಿರಿ ಪರ್ವತ ಶ್ರೇಣಿಯಲ್ಲಿ ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಉಗಮವಾಗಿ ಪೂರ್ವಾಭಿಮುಖವಾಗಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಮೂಲಕ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತಿದ್ದು, ಉಗಮದಿಂದ ಹಿಡಿದು ಬಂಗಾಳ ಕೊಲ್ಲಿಯನ್ನು ಸೇರುವವರೆಗೆ ಕಾವೇರಿ ಹಾಗೂ ಅದರ ಎಲ್ಲಾ ಉಪನದಿಗಳ ಜಲಾನಯನ ಪ್ರದೇಶವು ಒಟ್ಟಾರೆಯಾಗಿ 81,155 ಚದರ ಕಿ.ಮೀ ಗಳಾಗಿದ್ದು, ಇದರಲ್ಲಿ ಕರ್ನಾಟಕದಲ್ಲಿನ ಜಲಾನಯನ ಪ್ರದೇಶವು 34,273 ಚದರ ಕಿ.ಮೀ. ಗಳಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನಂತೆ ಕರ್ನಾಟಕ ರಾಜ್ಯವು 192 ಟಿಎಂಸಿ ನೀರನ್ನು ಅಂತರ ರಾಜ್ಯ ಸಂಪರ್ಕ ಸ್ಥಳ ಎಂದು ಪ್ರಸ್ತುತ ಗುರುತಿಸಲಾದ ಹಾಗೂ ಸಾಮಾನ್ಯ ಗಡಿ ರೇಖೆಯಲ್ಲಿ ಇರುವ ಕೇಂದ್ರ ಜಲ ಆಯೋಗದ ಬಿಳಿಗುಂಡ್ಲು ಜಲಮಾಪನಾ ಕೇಂದ್ರದಿಂದ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಪ್ರಮಾಣದ ನೀರನ್ನು ಬಹುಪಾಲು ಕೆ.ಆರ್.ಎಸ್. ಮತ್ತು ಕಬಿನಿ ಜಲಾಶಯಗಳಿಂದ ಹರಿಸಲಾಗುತ್ತಿದೆ. 49.452 ಟಿ.ಎಂ.ಸಿ. ಶೇಖರಣಾ ಸಾಮರ್ಥ್ಯವನ್ನು ಹೊಂದಿರುವ ಕೃಷ್ಣರಾಜಸಾಗರ ಜಲಾಶಯವು ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಏಕೈಕ ಜಲಾಶಯವಾಗಿದ್ದು, ಈ ಜಲಾಶಯದ ಕೆಳಭಾಗದಲ್ಲಿ ನದಿಯು ತಮಿಳುನಾಡು ರಾಜ್ಯವನ್ನು ಸೇರುವವರೆಗೆ ನದಿಯ ಜಲಾನಯನ ಪ್ರದೇಶವು 23,231 ಚದರ ಕಿ.ಮೀ. ಗಳಾಗಿದ್ದು, ಕರ್ನಾಟಕ ರಾಜ್ಯದ ಈ ಭಾಗದಲ್ಲಿ ಯಾವುದೇ ಶೇಖರಣಾ ವ್ಯವಸ್ಥೆ ಇರುವುದಿಲ್ಲವಾದ್ದರಿಂದ ಕಾವೇರಿ ನದಿಯು ತಮಿಳುನಾಡು ರಾಜ್ಯವನ್ನು ಸೇರುವವರೆಗೆ ಅನಿಯಂತ್ರಿತವಾಗಿ ಹರಿಯುತ್ತದೆ. ಅಲ್ಲದೆ, ಕೆ.ಆರ್.ಎಸ್. ಜಲಾಶಯದ ಕೆಳಭಾಗದಲ್ಲಿನ ಅಚ್ಚುಕಟ್ಟು ಪ್ರದೇಶದಲ್ಲಿ ಗಣನೀಯ ಪ್ರಮಾಣದ ಬಸಿನೀರು ಉತ್ಪತ್ತಿಯಾಗುತ್ತಿದೆ.

2. ಮುಂದುವರೆದು, ಬೆಂಗಳೂರು ನಗರದಿಂದ 100 ಕಿ.ಮೀ ಹಾಗೂ ಅರ್ಕಾವತಿ ಮತ್ತು ಕಾವೇರಿ ನದಿಗಳ ಸಂಗಮ ಸ್ಥಾನದಿಂದ 4 ಕಿ.ಮೀ ದೂರದಲ್ಲಿ ಮೇಕೆದಾಟು ಎಂಬ ಸ್ಥಳದ ಮೇಲ್ಭಾಗದಲ್ಲಿ ಸಮತೋಲನ / ಶೇಖರಣಾ ಜಲಾಶಯಗಳನ್ನು (Balancing / Storage reservoirs) ನಿರ್ಮಿಸಲು ಚಿಂತನೆ ನಡೆಸಿದ್ದು, ಈ ರೀತಿಯ ವ್ಯವಸ್ಥೆಯಿಂದ ತಮಿಳುನಾಡು ರಾಜ್ಯಕ್ಕೆ ಮಾಸಿಕವಾಗಿ ನಿಗಧಿಪಡಿಸಲಾದ ನೀರಿನ ಪ್ರಮಾಣವನ್ನು ನಿಯಂತ್ರಿಸಲು (to regulate) ಅನುಕೂಲವಾಗುವಂತೆ ನದಿಯ ಪುನಶ್ಚೇತನ, ಪರಿಸರ ಸಂರಕ್ಷಣೆ ಹಾಗೂ ಅಂತರ್ಜಲ ವೃದ್ಧಿಯನ್ನು ಮಾಡಿ ಕುಡಿಯುವ ನೀರು ಒದಗಿಸಲು ಈ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಯೋಜನೆಯ ಮುಖ್ಯ ಅಂಶಗಳು ಕೆಳಕಂಡಂತಿವೆ :

ಅ. ಕಾವೇರಿ ಜಲ ವಿವಾದ ನ್ಯಾಯ ಮಂಡಳಿಯ ಅಂತಿಮ ತೀರ್ಪಿನ ಪ್ರಕಾರ ಸದರಿ ಜಲಾಶಯದಿಂದ (ಮಳೆಗಾಲದಲ್ಲಿ ಬರುವ ನೀರನ್ನು ಶೇಖರಣೆ ಮಾಡಿಕೊಂಡು) ತಮಿಳುನಾಡಿಗೆ 192 ಟಿ.ಎಂ.ಸಿ. ನೀರನ್ನು (ಸಾಮಾನ್ಯ ವರ್ಷದಲ್ಲಿ – Normal year) ಹರಿಸಬಹುದಾಗಿರುತ್ತದೆ.

Scanned by CamScanner

ಆ. ಸುಮಾರು 400 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಬಹುದಾಗಿರುತ್ತದೆ.

ಇ. ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಕ್ಕೆ ಮತ್ತು ಕಾವೇರಿ ಕೊಳ್ಳದಲ್ಲಿನ ಗುರುತಿಸಲ್ಪಟ್ಟಿರುವ ನಗರ, ಪಟ್ಟಣ ಹಾಗೂ ಇತರೆ ಹಳ್ಳಿಗಳಿಗೆ ಸುಮಾರು 16.10 ಟಿ.ಎಂ.ಸಿ. ಮತ್ತು 50 ಟಿ.ಎಂ.ಸಿ. ಕುಡಿಯುವ ನೀರನ್ನು ಒದಗಿಸಬಹುದು.

ಈ. ಸದರಿ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ 433 ಟಿ.ಎಂ.ಸಿ. (which includes 419 TMC in the entire Cauvery basin + 10 TMC for environment protection + 4 TMC towards inevitable escape); ನೀರನ್ನು ತಮಿಳುನಾಡಿಗೂ, 270 ಟಿ.ಎಂ.ಸಿ ನೀರನ್ನು ಕರ್ನಾಟಕಕ್ಕೆ, 30 ಟಿ.ಎಂ.ಸಿ ಕೇರಳಕ್ಕೆ ಹಾಗೂ 7 ಟಿ.ಎಂ.ಸಿ. ಪುದುಚೇರಿಗೆ ಹಂಚಿಕೆಯಾಗಿದೆ.

ಉ. ಕರ್ನಾಟಕಕ್ಕೆ ಹಂಚಿಕೆಯಾಗಿರುವ 270 ಟಿ.ಎಂ.ಸಿ. ನೀರಿನಲ್ಲಿ, ಹೆಚ್ಚುವರಿ ನೀರಿನ ಭಾಗವಾದ 17.64 ಟಿ.ಎಂ.ಸಿ. ಕೂಡ ಸೇರಿರುತ್ತದೆ.

ಊ. ಮೇಲೆ ತಿಳಿಸಿರುವ 17.64 ಟಿ.ಎಂ.ಸಿ. ನೀರನ್ನು ಬೆಂಗಳೂರು, ಅದರ ಸುತ್ತಮುತ್ತಲಿನ ಪ್ರದೇಶಗಳು ಹಾಗೂ ಕಾವೇರಿ ಕೊಳ್ಳದಲ್ಲಿನ ಇತರೆ ನಗರ ಹಾಗೂ ಉಳಿದ ಪ್ರದೇಶಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ನಿಟ್ಟಿನಲ್ಲಿ ಉಪಯೋಗಿಸಿಕೊಳ್ಳಲು ಯಾವುದೇ ತೊಂದರೆ ಇರುವುದಿಲ್ಲ. ಇದನ್ನು ಪರಿಗಣಿಸಿ ಮೇಕೆದಾಟು ಬಳಿ ಮೇಕೆದಾಟು ಜಲ ವಿದ್ಯುತ್ ಯೋಜನೆಯನ್ನು ರೂಪಿಸಲಾಗಿರುತ್ತದೆ.

3. ಅಲ್ಲದೇ, ಸದರಿ ಯೋಜನಾ ವರದಿಯಲ್ಲಿ ಈ ಕೆಳಕಂಡ ಅಂಶಗಳನ್ನು ಅಳವಡಿಸಲಾಗಿರುತ್ತದೆ:

(a) It is proposed to construct a high level gravity dam at Mekedatu with a full reservoir elevation of 440 mtrs. having a storage capacity of 67.14 TMC.

(b) The dam will have suitable spill-way in terms of radial gates to effectively discharge the design flood with suitable energy dissipating arrangements on the downstream side.

(c) The extent of submergence of the land on the upstream at the full reservoir level works out to 4996 Ha.

(d) Intake structure with water conducting system consisting of required number of pen stocks, pressure shafts which will be embedded in the body of the dam to feed the water continuously to the generating units.

(e) Underground power house is proposed downstream of Mekedatu dam with an installed capacity of 400 MW.

(f) Average annual energy available is 1357.84 Million units (Annual PLF 41.5%).

4. ಕೆ.ಆರ್.ಎಸ್, ಹೇಮಾವತಿ, ಹಾರಂಗಿ ಮತ್ತು ಕಬಿನಿ ಜಲಾಶಯಗಳಲ್ಲಿನ ಒಳಹರಿವಿನ ಪ್ರಮಾಣವು ಮಾಸಿಕವಾಗಿ ನಿಗಧಿಪಡಿಸಲಾದ ನೀರಿನ ಪ್ರಮಾಣಕ್ಕಿಂತ ಬಹುತೇಕ ತಿಂಗಳುಗಳಲ್ಲಿ ಕಡಿಮೆಯಾಗಿರುವುದರಿಂದ ಜಲಾಶಯಗಳಲ್ಲಿ ಸಂಗ್ರಹವಾಗಿರುವ ನೀರಿನಿಂದ ಹರಿಸಬೇಕಾಗಿದ್ದು, ಇದರಿಂದ, ಜಲಾಶಯಗಳ ಯೋಜಿತ ಅಚ್ಚುಕಟ್ಟು ಪ್ರದೇಶಕ್ಕೆ ಸಮರ್ಪಕವಾಗಿ ನೀರು ಹರಿಸಲು ಸಾಧ್ಯವಾಗದೆ ತೊಂದರೆ ಉಂಟಾಗುತ್ತಿದೆ. ಈ ಹಿನ್ನಲೆಯಲ್ಲಿ ಮಳೆಗಾಲದಲ್ಲಿ ಹೆಚ್ಚುವರಿಯಾಗಿ ಹರಿದು ಹೋಗುವ ನೀರನ್ನು ಸಂಗ್ರಹಣೆ ಮಾಡಿ, ಮಾಸಿಕವಾಗಿ ನಿಗಧಿಪಡಿಸಲಾದ ನೀರಿನ ಪ್ರಮಾಣವನ್ನು

Scanned by CamScanner

ತಮಿಳುನಾಡಿಗೆ ನಿಯಂತ್ರಿಸಲು (to regulate) ಅನುಕೂಲವಾಗುವಂತೆ ಮೇಕೆದಾಟು ಸ್ಥಳದ ಮೇಲ್ಭಾಗದಲ್ಲಿ ಸಮತೋಲನ / ಶೇಖರಣಾ ಜಲಾಶಯಗಳನ್ನು ನಿರ್ಮಿಸುವುದು ಅತ್ಯಗತ್ಯವಾಗಿದ್ದು, ಇದರಿಂದ ವಿದ್ಯುತ್ ಉತ್ಪಾದನೆಯನ್ನು ಮಾಡಬಹುದಾಗಿದೆ ಮತ್ತು ಬೆಂಗಳೂರು ನಗರ ಹಾಗೂ ಇತರೆ ನಗರ / ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಅನುಕೂಲವಾಗುತ್ತದೆ.

5. ಈ ಹಿಂದೆ ಶ್ರೀ ಕೆ.ಸಿ.ರೆಡ್ಡಿ ಯವರ ನೇತೃತ್ವದಲ್ಲಿ ಮತ್ತು ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡ ಮೇಲ್ಮಟ್ಟದ ಸಮಿತಿಯನ್ನು 1995 ರಲ್ಲಿ ಅಂದಿನ ಸರ್ಕಾರವು ನೇಮಿಸಿದ್ದು, ಈ ಸಮಿತಿಯು ಮೇಕೆದಾಟು ಜಲ ವಿದ್ಯುತ್ ಯೋಜನೆಯ ರೂಪು ರೇಷೆಯ ಬಗ್ಗೆ ಪರಿಶೀಲನೆ ನಡೆಸಿ ಜಲಾಶಯದ ಗರಿಷ್ಠ ಮಟ್ಟವನ್ನು ಆರ್.ಎಲ್. 478.00 ಮೀ. ನಿಂದ ಆರ್.ಎಲ್. 440.00 ಮೀ. ಗೆ ಇಳಿಸಲು ಸಮಿತಿ ವರದಿ ನೀಡಿರುತ್ತದೆ.

6. ಆರ್ಥಿಕ ಇಲಾಖೆಯು ತನ್ನ ದಿನಾಂಕ:20-08-2016 ರ ಟಿಪ್ಪಣಿಯಲ್ಲಿ ಸದರಿ ಪ್ರಸ್ತಾವನೆ ಬಗ್ಗೆ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ :

> *"ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಕಾನೂನು ತೊಡಕು ಇದ್ದರೂ ಕೇಂದ್ರ ಜಲ ಆಯೋಗದ ಅನುಮೋದನೆ ಪಡೆಯಲು ಮತ್ತು ಸರ್ವೋಚ್ಚ ನ್ಯಾಯಾಲಯದ ಅನುಮತಿ ಪಡೆಯಲು ಉದ್ದೇಶಿಸಿದ್ದರಿಂದ ಈ ಯೋಜನೆಗೆ ತಾತ್ವಿಕ ಒಪ್ಪಿಗೆ ನೀಡಲು ಸಹಮತಿಸಿದೆ ಹಾಗೂ ಕಾಮಗಾರಿ ಪ್ರಾರಂಭಿಸುವ ಮೊದಲು source of funding ಮತ್ತು ಈ ಯೋಜನೆಗೆ finance plan ಸಿದ್ಧಪಡಿಸಿ ಆರ್ಥಿಕ ಇಲಾಖೆಯಿಂದ ಅಭಿಪ್ರಾಯ ಪಡೆಯಲು ಜಲ ಸಂಪನ್ಮೂಲ ಇಲಾಖೆಗೆ ತಿಳಿಸಲಾಗಿದೆ."*

7. ಅದರಂತೆ, ಕಾವೇರಿ ನದಿಗೆ ಕೆ.ಆರ್.ಸಾಗರ ಅಣೆಕಟ್ಟೆ ಕೆಳಭಾಗದಲ್ಲಿ ಮೇಕೆದಾಟು ಸಮೀಪ ಸಮತೋಲನ / ಶೇಖರಣಾ ಜಲಾಶಯವನ್ನು (Balancing / Storage reservoir) ನಿರ್ಮಿಸುವ ರೂ.5912.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ತಾತ್ವಿಕ ಅನುಮೋದನೆಯನ್ನು ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಇವರು ಕೋರಿರುತ್ತಾರೆ.

8. ಸದರಿ ಪ್ರಸ್ತಾವನೆಯ ಬಗ್ಗೆ ಮುಖ್ಯ ಇಂಜಿನಿಯರ್ (ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು, ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಕಾವೇರಿ ಹಾಗೂ ಇನ್ನಿತರೆ ಜಲ ವಿವಾದಗಳ ವಿಷಯದಲ್ಲಿ ರಾಜ್ಯದ ವಕೀಲರ ತಂಡದಲ್ಲಿರುವ ವಕೀಲರಾದ ಶ್ರೀ ಮೋಹನ್ ವಿ.ಕಾತರ್ಕಿ ರವರ ಅಭಿಪ್ರಾಯ / ಸಲಹೆಗಳನ್ನು ಪಡೆಯಲಾಗಿದೆ.

9. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ ಹಾಗೂ ಕಂಡಿಕೆ-6 ರಲ್ಲಿ ತಿಳಿಸಿರುವ ಸಲಹೆ / ಅಂಶಗಳನ್ನು ಪಾಲಿಸುವ ಷರತ್ತುಗಳಿಗೊಳಪಟ್ಟು ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 136 ಎಂಎಂಕೆ 2013,**
**ಬೆಂಗಳೂರು, ದಿನಾಂಕ:13-03-2017**

ಕಾವೇರಿ ನದಿಗೆ ಕೆ.ಆರ್.ಸಾಗರ ಅಣೆಕಟ್ಟೆ ಕೆಳಭಾಗದಲ್ಲಿ ಮೇಕೆದಾಟು ಸಮೀಪ ಸಮತೋಲನ / ಶೇಖರಣಾ ಜಲಾಶಯವನ್ನು (Balancing / Storage reservoir) ನಿರ್ಮಿಸುವ ರೂ.5912.00 ಕೋಟಿಗಳ (ರೂಪಾಯಿ ಐದು ಸಾವಿರದ ಒಂಬೈನೂರ ಹನ್ನೆರಡು ಕೋಟಿಗಳು ಮಾತ್ರ) ಮೊತ್ತದ ವಿವರವಾದ ಯೋಜನಾ ವರದಿಗೆ, ಕಂಡಿಕೆ-6 ರಲ್ಲಿ

Scanned by CamScanner

ನಮೂದಿಸಲಾಗಿರುವ ಸಲಹೆ / ಅಂಶಗಳನ್ನು ಪಾಲಿಸುವ ಷರತ್ತುಗಳಿಗೊಳಪಟ್ಟು ತಾಂತ್ರಿಕ ಅನುಮೋದನೆ ನೀಡಲಾಗಿದೆ. .....

2. ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ:ಆಇ 345 ಆಕೋ-1/2016, ದಿನಾಂಕ:20-08-2016, ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Ananthu
(ಕೆ.ವಿ.ಅನಂತು) 13.03.2017
ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ, ಎಂಎಂಐ-3),
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್(ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ನೀರಾವರಿ (ದಕ್ಷಿಣ) ವಲಯ, ಮೈಸೂರು.
5. ಸರ್ಕಾರದ ಅಪರ ಕಾರ್ಯದರ್ಶಿಗಳು(ಅಂರಾಜವಿ), ಕಾನೂನು ಇಲಾಖೆ, (ಟಿಪ್ಪಣಿ ಸಂಖ್ಯೆ:ಲಾ/21/ಸಿ/ಅಭಿಪ್ರಾಯ/2017, ದಿನಾಂಕ:13-02-2017).
6. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ವಿಷಯ ಸಂಖ್ಯೆ:ಸಿ-116/2017, ದಿನಾಂಕ:15-02-2017).
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned by CamScanner